Ref.No.79/2021

MW-1,

ದಿನಾಂಕಃ 05-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ನೇ ಪಾರ್ಟಿ ಇವರಿಂದ ಸ್ವತಃ

ಮೈಸೂರು ನಗರ ವಿಭಾಗದ ಎಲ್ಲಾ ಘಟಕಗಳು ವಿಭಾಗೀಯ ನಿಯಂತ್ರಣಾಧಿಕಾರಿಯವರ ವ್ಯಾಪ್ತಿಯೊಳಗೆ ಬರುತ್ತವೆ ಎಂದರೆ ನಿಜ. ಎಲ್ಲಾ ಘಟಕಗಳ ಅಂಕಿಅಂಶಗಳು ವಿಭಾಗೀಯ ನಿಯಂತ್ರಣಾಧಿಯವರಿಗೆ ತಿಳಿದಿರುತ್ತವೆ ಎಂದರೆ ನಿಜ. ವಿಭಾಗೀಯ ನಿಯಂತ್ರಣಾಧಿಕಾರಿಯವರಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಬಂದಿರುತ್ತೇನೆ. ನಮ್ಮ ಸಂಸ್ಥೆಯ ನೌಕರರಿಗೆ ಸಂಬಂಧಪಟ್ಟಂತೆ ನಿಯಮಾವಳಿಗಳನ್ನು ರಚಿಸಲಾಗಿದೆ ಎಂದರೆ ನಿಜ. ತಾಂತ್ರಿಕ ಸಿಬ್ಬಂದಿಯಾದ 1 ನೇ ಪಾರ್ಟಿಯವರಿಗೆ ಹೆಚ್ಚುವರಿ ವೇಳೆ ಭತ್ಯೆ ನೀಡುವ ಬಗ್ಗೆ ಯಾವುದೇ ನಿಯಮಾವಳಿಗಳನ್ನು ರಚಿಸಲಾಗಿರುವುದಿಲ್ಲ. ನನಗೆ ತೋರಿಸಲಾಗುತ್ತಿರುವ ದಾಖಲೆಯು ಹೆಚ್ಚುವರಿ ವೇಳೆ ಭತ್ಯೆಯ ಬಗ್ಗೆ ಸುತ್ತೋಲೆ ಎಂದರೆ ಸಾಕ್ಷಿ ಅದು ಹೆಚ್ಚುವರಿ ಕೆಲಸ ಮಾಡಿಸುವ ಬಗ್ಗೆ ಸುತ್ತೋಲೆ ಎಂದು ನುಡಿಯುತ್ತಾರೆ. ಸಾಕ್ಷಿಯು ಗುರುತಿಸಿದ ಸದರಿ ದಾಖಲೆಯನ್ನು ನಿಶಾನೆ ಡಬ್ಲ್ಯೂ-28 ಎಂದು ಗುರುತಿಸಲಾಯಿತು. ಆ ಸುತ್ತೋಲೆಯಲ್ಲಿ ಹೆಚ್ಚುವರಿ ಕೆಲಸವನ್ನು ಕಡಿಮೆ ಮಾಡಿಸಿ ಎಂದು ಹೇಳಿದ್ದಾರೆ ಎಂದರೆ ನಿಜ. ನಿಶಾನೆ ಡಬ್ಲ್ಯೂ-1 ರಲ್ಲಿ ನನಗೆ ನೀಡಿರುವ ಮೆಮೋ ಮತ್ತು ಅದಕ್ಕೆ ನಾನು ನೀಡಿರುವ ಉತ್ತರ ಇದೆ ಎಂದರೆ ನಿಜ. ಆ ಉತ್ತರದಲ್ಲಿರುವ ಅಂಶಗಳ ಬಗ್ಗೆ ಆಕ್ಷೇಪಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಮೈಸೂರು ನಗರ ವಿಭಾಗಕ್ಕೆ ಇಷ್ಟೇ ತಾಂತ್ರಿಕ ಸಿಬ್ಬಂದಿ ಇರಬೇಕು ಎಂದು ನಿಯಮವಿದೆ ಎಂದರೆ ನಿಜ. ನಿಶಾನೆ ಡಬ್ಲ್ಯೂ-5 ಮತ್ತು 10 ರಲ್ಲಿ 2 ನೇ ಪಾಳಿಗೆ ಒಬ್ಬರನ್ನು ನೇಮಕ ಮಾಡಿ ಎಂದು ತಾಂತ್ರಿಕ ಸೂಪರ್ವೈಸರವರು ಷರಾ ಬರೆದಿದ್ದಾರೆ ಎಂದರೆ ಸಾಕ್ಷಿಯು ನಿಶಾನೆ ಡಬ್ಲ್ಯೂ-5 ರಲ್ಲಿ ಮಾತ್ರ ಆ ರೀತಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ನಿಶಾನೆ ಡಬ್ಲ್ಯೂ-27 ರಲ್ಲೂ ಕೂಡ ಆ ರೀತಿ ಷರಾ ಬರೆದಿದ್ದಾರೆ ಎಂದರೆ ನಿಜ. 2 ನೇ ಪಾಳಿಗೆ ನಾನು ಸಿಬ್ಬಂದಿಯನ್ನು ನೀಡಲಿಲ್ಲ 1 ನೇ ಪಾರ್ಟಿಯವರನ್ನು ನಿಯೋಜಿಸಲಾಗಿತ್ತು ಎಂದರೆ ಸಾಕ್ಷಿ ಅವರನ್ನು ನಿಯೋಜನೆ ಮಾಡಿರಲಿಲ್ಲ ಆದರೆ ಅವರ ಪಾಳಿಯನ್ನು ಅವರು ಮಾಡಿದ್ದಾರೆ ಎಂದು ನುಡಿಯುತ್ತಾರೆ. 2 ನೇ ಪಾಳಿಗೆ ಸಿಬ್ಬಂದಿಯನ್ನು ನಿಯೋಜಿಸದೇ ಇರುವುದರಿಂದ 1 ನೇ ಪಾರ್ಟಿಯವರೇ ಹೆಚ್ಚುವರಿಯಾಗಿ ಆ ಕೆಲಸ ಮಾಡಿದ್ದಾರೆ ಎಂದರೆ ಸಾಕ್ಷಿ ಯಾವುದೇ ಆದೇಶ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಬೇರೆ ಸಿಬ್ಬಂದಿಯನ್ನು 2 ನೇ ಪಾಳಿಗೆ ನೇಮಕ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಅದನ್ನು ಘಟಕ ವ್ಯವಸ್ಥಾಪಕರು ಮಾಡಬೇಕಾಗುತ್ತದೆ. 2 ನೇ ಪಾಳಿಯಲ್ಲಿ ಉಗ್ರಾಣದಲ್ಲಿ ಯಾವ ಸಿಬ್ಬಂದಿ ಕೆಲಸ ಮಾಡಿದ್ದರು ಎಂಬ ಬಗ್ಗೆ ದಾಖಲೆಯನ್ನು ನಾನು ಹಾಜರು ಮಾಡಿಲ್ಲ ಎಂಬುದು ನಿಜ. ಸಾಕ್ಷಿಯು ಅದು ಈ ಪ್ರಕರಣಕ್ಕೆ

ಸಂಬಂಧಪಟ್ಟದ್ದಲ್ಲ ಎಂದು ನುಡಿಯುತ್ತಾರೆ. ನಿಶಾನೆ ಡಬ್ಲ್ಯೂ-6 ತಾಂತ್ರಿಕ ಸಿಬ್ಬಂದಿ ಕೊರತೆ ಬಗ್ಗೆ ತಾಂತ್ರಿಕ ಮೇಲ್ವಿಚಾರಕರು ಬರೆದ ಪತ್ರವಾಗಿದೆ ಎಂದರೆ ನಿಜ. 114 ಸಿಬ್ಬಂದಿಗಳ ಪೈಕಿ 57 ಸಿಬ್ಬಂದಿಗಳು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಅದರಲ್ಲಿ ಬರೆದಿದ್ದಾರೆ ಎಂದರೆ ನಿಜ. ಶೇ.51 ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದೆ ಎಂದು ಅದರಲ್ಲಿ ಬರೆದಿದ್ದಾರೆ ಎಂಬುದು ನಿಜ. ನಿಶಾನೆ ಡಬ್ಲ್ಯೂ-14 ಡಿಪೋ ಮ್ಯಾನೇಜರವರು ವಿಭಾಗೀಯ ನಿಯಂತ್ರಣಾಧಿಕಾರಿಯವರಿಗೆ ಹೆಚ್ಚುವರಿ ಕರ್ತವ್ಯ ನಿರ್ವಹಿಸಿದ ಬಗ್ಗೆ ಹೆಚ್ಚುವರಿ ಭತ್ಯೆಯನ್ನು ಕೊಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಬರೆದ ಪತ್ರವಾಗಿದೆ ಎಂದರೆ ನಿಜ. ಆದರೂ ಕೂಡ 1 ನೇ ಪಾರ್ಟಿಯವರಿಗೆ ಹೆಚ್ಚುವರಿ ಭತ್ಯೆಯನ್ನು ಕೊಟ್ಟಿಲ್ಲ ಎಂದರೆ ನಿಜ. 1 ನೇ ಪಾರ್ಟಿಯವರು ಹೆಚ್ಚುವರಿ ಭತ್ಯೆಯನ್ನು ಕೇಳಿದಕ್ಕೆ ಬಂಟ್ವಾಳ ಘಟಕಕ್ಕೆ ವರ್ಗಾವಣೆ ಮಾಡಲಾಗಿತ್ತು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಿಶಾನೆ ಡಬ್ಲ್ಯೂ-17 ದುರುದ್ದೇಶಿದಿಂದ 1 ನೇ ಪಾರ್ಟಿಯವರನ್ನು ಬಂಟ್ವಾಳಕ್ಕೆ ವರ್ಗಾವಣೆ ಮಾಡಿದ ಬಗ್ಗೆ ಅಧಿಕಾರಿಗಳ ವಿರುದ್ಧ ಆರಕ್ಷಕ ಅಧೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ಧೇಶನಾಲಯ ಅವರಿಗೆ ಸಲ್ಲಿಸಿದ ದೂರು ಅರ್ಜಿ ಎಂದರೆ ನಿಜ. ಸದರಿ ದೂರು ಸಲ್ಲಿಸಿದ ನಂತರ 1 ನೇ ಪಾರ್ಟಿಯವರನ್ನು ಮತ್ತೆ ಮೈಸೂರು ನಗರಕ್ಕೆ ವರ್ಗಾಯಿಸಲಾಯಿತು ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಡಬ್ಲ್ಯೂ-7 ರ ಪ್ರಕಾರ 1 ನೇ ಪಾರ್ಟಿಯವರನ್ನು 2 ನೇ ಪಾಳಿ ಕರ್ತವ್ಯಕ್ಕೆ 16 ಗಂಟೆಗೆ ಕಳುಹಿಸಿದ್ದಾರೆ ಎಂದರೆ ನಿಜ. ನಿಶಾನೆ ಡಬ್ಲ್ಯೂ-24 ರಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಸಿಬ್ಬಂದಿಗಳ ಮನ ಒಲಿಸಿ ಹೆಚ್ಚು ಸಮಯ ಕೆಲಸ ಮಾಡಿಸುತ್ತಿದ್ದೇನೆ ಎಂದು ತಾಂತ್ರಿಕ ಮೇಲ್ವಿಚಾರಕರು ದಾಖಲಿಸಿದ್ದಾರೆ ಎಂದರೆ ನಿಜ. ಆದರೆ 1 ನೇ ಪಾರ್ಟಿಯವರಿಂದಲೇ ಆ ಕೆಲಸ ಮಾಡಿಸಿದ್ದಾರೆ ಎಂಬ ಬಗ್ಗೆ ಉಲ್ಲೇಖ ಇರುವುದಿಲ್ಲ. ಘಟಕದ ಗೇಟಿನಲ್ಲಿ ತಾಂತ್ರಿಕ ಸಿಬ್ಬಂದಿಯವರು ಒಳ ಬಂದಾಗ ಮತ್ತು ಹೊರ ಹೋದಾಗ ಕರ್ತವ್ಯಕ್ಕೆ ಹಾಜರಾದ ಮತ್ತು ಹೊರ ಹೋದ ಸಮಯವನ್ನು ನಮೂದು ಮಾಡುತ್ತಾರೆ ಎಂದರೆ ನಿಜ. ಘಟಕದಲ್ಲಿ ಹಾಜರಾತಿ ಪುಸ್ತಕವನ್ನು ನಿರ್ವಹಿಸಲಾಗುತ್ತದೆ ಎಂದರೆ ನಿಜ. ಸದರಿ ಪುಸ್ತಕಗಳು ಡಿಪೋ ಮ್ಯಾನೇಜರ್ ರವರ ಸುಪರ್ದಿಯಲ್ಲಿ ಇರುತ್ತದೆ ಎಂದರೆ ನಿಜ. ಇಡೀ ವಿಭಾಗದ ಪುಸ್ತಕಗಳೆಲ್ಲವೂ ವಿಭಾಗೀಯ ನಿಯಂತ್ರಣಾಧಿಕಾರಿಯವರ ಸುಪರ್ದಿಯಲ್ಲಿ ಇರುತ್ತವೆ ಎಂದರೆ ನಿಜ. ಸದರಿ ಪುಸ್ತಕದಲ್ಲಿ 1 ನೇ ಪಾರ್ಟಿಯವರು ಕರ್ತವ್ಯಕ್ಕೆ ಹಾಜರಾದ ಮತ್ತು ಹೊರ ಹೋದ ಸಮಯವನ್ನು ನಮೂದು ಮಾಡಿದ್ದಾರೆ ಎಂಬುದು ನಿಜ. ಈ ಬಗ್ಗೆ ದಾಖಲೆಗಳು ಇದ್ದರೂ ಕೂಡ ನಿಶಾನೆ ಎಂ-1 ರಲ್ಲಿ ಘಟಕ ವ್ಯವಸ್ಥಾಪಕರು ಯಾವುದೇ ಮಾಹಿತಿ ಇಲ್ಲ ಎಂದು ಸುಳ್ಳಾಗಿ ನಮೂದಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪಾರ್ಟಿಯವರು ಕರ್ತವ್ಯಕ್ಕೆ ಹಾಜರಾದ ಮತ್ತು ಹೊರ ಹೋದ ಸಮಯದ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. 1 ನೇ ಪಾರ್ಟಿಯವರು ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸಿದ ಬಗ್ಗೆ ಭತ್ಯೆಯನ್ನು ಕೊಡಲು ಏನೂ ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರು ಹೆಚ್ಚುವರಿಯಾಗಿ ಕರ್ತವ್ಯ

Ref.No.79/2021

MW-1,

ನಿರ್ವಹಿಸುವ ಬಗ್ಗೆ ಆದೇಶ ಇಲ್ಲ ಆದ್ದರಿಂದ ಅವರಿಗೆ ಹೆಚ್ಚುವರಿ ಭತ್ಯೆಯನ್ನು ಕೊಡಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ತಾಂತ್ರಿಕ ಸಿಬ್ಬಂದಿಯವರಿಂದ ಹೆಚ್ಚುವರಿ ಕೆಲಸ ಮಾಡಿಸಬೇಡಿ ಎಂದು 2 ನೇ ಪಾರ್ಟಿಯವರು ಆದೇಶ ಮಾಡಿರುತ್ತಾರೆ. ವಾರದ ರಜಾ ದಿನದಲ್ಲಿ 1 ನೇ ಪಾರ್ಟಿಯವರು ಕರ್ತವ್ಯ ನಿರ್ವಹಿಸಿದ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ನಮೂದು ಇದೆ ಎಂದರೆ ಸಾಕ್ಷಿ 2004 ರಲ್ಲಿ ಆ ಬಗ್ಗೆ ನಮೂದು ಕಂಡುಬರುತ್ತದೆ ಎಂದು ನುಡಿಯುತ್ತಾರೆ. 1 ನೇ ಪಾರ್ಟಿಯವರಿಗೆ ನೇಮಕಾತಿ ಆದಾಗಿನಿಂದ ಈವರೆಗೂ ಅವರಿಂದ ವಾರದ ರಜಾ ದಿನಗಳಲ್ಲಿ ಮತ್ತು ಹೆಚ್ಚುವರಿ ಕೆಲಸವನ್ನು ಮಾಡಿಸಿದ ಬಗ್ಗೆ ದಾಖಲೆಗಳು ಕಛೇರಿಯಲ್ಲಿ ಇರುತ್ತವೆ ಎಂದರೆ ಸಾಕ್ಷಿ ಅದಕ್ಕೆ ಬದಲಿ ವಾರದ ರಜೆಯನ್ನು ಪಡೆಯಲು ಅವಕಾಶ ಇದೆ ಮತ್ತು ಅದನ್ನು ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಆ ಬಗ್ಗೆ 1 ನೇ ಪಾರ್ಟಿಯವರ ಸೇವಾ ಅವಧಿಯ ಪೂರ್ಣ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಿಶಾನೆ ಡಬ್ಲ್ಯೂ-7 ರಲ್ಲಿ ದಿನಾಂಕಃ7-12-2012 ರಂದು ಉಗ್ರಾಣ ಶಾಖೆ ವಿಭಾಗದ 1 ನೇ ಪಾರ್ಟಿಯವರು ಕೀಲಿ ಪಡೆದು ಸಹಿ ಹಾಕಿರುವ ಬಗ್ಗೆ ದಾಖಲೆ ಇದೆ. ಆ ಬಗ್ಗೆ ಪೂರ್ಣ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಹಳೇ ದಾಖಲಾತಿಗಳನ್ನು ನಾಶ ಮಾಡುತ್ತಾರೆ ಎಂದು ನುಡಿಯುತ್ತಾರೆ. ಆ ದಾಖಲೆಗಳನ್ನು ನಾಶ ಮಾಡುವ ಬಗ್ಗೆ ಇರುವ ಸುತ್ತೋಲೆಯನ್ನು ನಾನು ಹಾಜರು ಮಾಡಿಲ್ಲ ಬೇಕಾದರೆ ಮುಂದಿನ ದಿನಗಳಲ್ಲಿ ನಾನು ಹಾಜರು ಮಾಡುತ್ತೇನೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ

ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.